## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.

## ಸಿ.ಸಿ.ನಂ.444/2018

| | | | |
|---|---|---|---|
| ಸಾಕ್ಷಿದಾರರ ಹೆಸರು | ಜಂಬುನಾಥ ಮಜ್ಜಗಿ | ಸಿಡಬ್ಲ್ಯೂ | 8 |
| ತಂದೆಯ ಹೆಸರು | ಭೂತಪ್ಪ | ಪಿಡಬ್ಲ್ಯೂ | 2 |
| ವಯಸ್ಸು | 55 ವರ್ಷ | | |
| ಉದ್ಯೋಗ | ತಹಶೀಲ್ದಾರ, ಹುಬ್ಬಳ್ಳಿ | | |
| ವಾಸಸ್ಥಳ | ಹುಬ್ಬಳ್ಳಿ | | |

ದಿಃ**26.11.2025** ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.

**1)** ನಾನು ದಿನಾಂಕಃ 18.08.2016 ರಿಂದ ದಿನಾಂಕಃ 16.08.2018 ರವರೆಗೆ ಹಾವೇರಿ ತಹಶೀಲ್ದಾರ ಆಗಿ ಸೇವೆ ಸಲ್ಲಿಸಿದ್ದೇನೆ. ನನಗೆ ಈ ಪ್ರಕರಣದ ಕುರಿತಾಗಿ ನಮ್ಮ ಕಛೇರಿಯಿಂದ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಅರ್ಹ ಪಲಾನುಭವಿಗಳಿಗೆ ನಮ್ಮ ಇಲಾಖೆಯಿಂದ ಅನುಮತಿಯನ್ನು ಪಡೆದ ನ್ಯಾಯಬೆಲೆ ಅಂಗಡಿಗಳ ಮೂಲಕ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಅಗತ್ಯ ವಸ್ತುಗಳಾದ ಅಕ್ಕಿ, ಗೋಧಿ, ಸೀಮೆಎಣ್ಣೆ ಮತ್ತು ಇತರೇ ದವಸ ಧನ್ಯಗಳನ್ನು ಸರ್ಕಾರದ ನಿಯಮದಂತೆ ವಿತರಿಸಲಾಗುತ್ತಿತ್ತು. 2016 ನೇ ಇಸ್ವಿಯಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಸುಧಾರಣೆಗೆ ತರುವ ಸಲುವಾಗಿ ಕಾರ್ಡುದಾರರ ಕುಟುಂಬದ ಆಧಾರಕಾರ್ಡ ಜೋಡಣೆಯಾಗಿದ್ದು ಸದರಿ ಕಾರ್ಡುದಾರರು ನಮ್ಮ ಇಲಾಖೆಯಿಂದ ಅನುಮತಿಯನ್ನು ಪಡೆದ ಪ್ರಾಂಚೈಸಿಯವರಿಂದ ಕೋಪನನ್ನು ಪಡೆದುಕೊಂಡು ಸದರಿ ಕೋಪನನನ್ನು ಅವರಿಗೆ ನಿಗದಿಪಡಿಸಿದ ನ್ಯಾಯಬೆಲೆ ಅಂಗಡಿಯಲ್ಲಿ ಸದರಿ ಕಾರ್ಡನ್ನು ಕಾರ್ಡುದಾರರಿಗೆ ವಸ್ತುಗಳನ್ನು ವಿತರಿಸಲಾಗುತ್ತಿತ್ತು.

2) ದಿನಾಂಕಃ 07.10.2016 ಹಾಗೂ ದಿನಾಂಕಃ 11.10.2016 ರಂದು ಸರ್ಕಾರದ ಕಾರ್ಯದರ್ಶಿಗಳು ದಿನಾಂಕಃ 22.10.2016 ರಂದು ಲಿಖಿತವಾಗಿ ಜಿಲ್ಲಾಧಿಕಾರಿ ಹಾವೇರಿ ಇವರಿಗೆ ನಿರ್ದೇಶನವನ್ನು ಕೊಟ್ಟು ಈ ಪ್ರಕರಣದಲ್ಲಿ ಹೇಳಿದಂತಹ ದಾಖಲಾತಿಗಳ ಕುರಿತಾಗಿ ಆದಂತಹ ನಕಲಿ ಕೂಪನಗಳನ್ನು ಬೇರೆಯವರಿಗೆ ಕೊಟ್ಟ ವಿಷಯದ ಮೇಲೆ ಜಿಲ್ಲಾಧಿಕಾರಿ ಹಾವೇರಿ ಇವರಿಗೆ ಈ ಪ್ರಕರಣದಲ್ಲಿ ಹೇಳಿದಂತಹ ಘಟನೆಯ ಕುರಿತಾಗಿ ತನಿಖೆ ಮಾಡಲು ಲಿಖಿತವಾಗಿ ನಿರ್ದೇಶನವನ್ನು ಕೊಟ್ಟಿರುತ್ತಾರೆ. ಚಾ.ಸಾ-1 ಇವರು ತನಿಖೆ ಮಾಡಿ

ಆ ರೀತಿಯಿಂದ ಸದರಿ ಇಲಾಖೆಯವರು ಸಂಬಂದಪಟ್ಟ ರೇಷನ ಅಂಗಡಿ ಮಾಲೀಕರ ಪರಿಶೀಲನೆ ಮಾಡಿದಾಗ ಸದರಿ ರೇಶನ ಅಂಗಡಿ ಮಾಲೀಕರ ಹತ್ತಿರ ನಕಲಿ ಕೂಪನಗಳು ದೊರತಿದ್ದು, ನಂತರ ಆ ರೀತಿ ಸದರಿ ನಕಲಿ ಕೊಪನಗಳು ಕುರಿತಾಗಿ ದಿನಾಂಕ: 25.10.2016 ರಂದು ಆಹಾರ ನಿರೀಕ್ಷಕರು ನನಗೆ ಕೊಟ್ಟಂತಹ ವರದಿಯ ಆಧಾರದ ಮೇಲೆ ಪುನಃ ನಾನು ಅದೇ ದಿನಾಂಕದಂದು ವರದಿಯನ್ನು ತಯಾರಿಸಿ ಜಿಲ್ಲಾಧಿಕಾರಿ ಹಾವೇರಿ ಇವರಿಗೆ ವರದಿಯನ್ನು ಸಲ್ಲಿಸಿದ್ದೇನೆ.

3) ನಂತರ ನಾನು ಕೊಟ್ಟಂತಹ ವರದಿಯ ಆಧಾರದ ಮೇಲೆ ಜಿಲ್ಲಾಧಿಕಾರಿ ಹಾವೇರಿ ಇವರು ಸಂಬಂದಪಟ್ಟಂತಹ ನ್ಯಾಯ ಬಲೆ ಅಂಗಡಿಯ ಮಾಲೀಕರಿಗೆ ಕೊಟ್ಟಂತಹ ನ್ಯಾಯಬಲೆ ಅಂಗಡಿಗಳನ್ನು ನಡೆಸಲು ಕೊಟ್ಟಂತಹ ಪರವಾನಿಗೆಯನ್ನು ಅಮಾನತುಗೊಳಿಸಿ ಅಂತಹ ನ್ಯಾಯಬೆಲೆ ಅಂಗಡಿಗಳ ಮಾಲೀಕರ ವಿರುದ್ದ ತನಿಖೆ ನಡೆಸಿ ನಂತರ ಪಿರ್ಯಾದಿಯನ್ನು ಕೊಟ್ಟು ಪ್ರಕರಣವನ್ನು ದಾಖಲುಪಡಿಸಲು ನಿರ್ದೇಶನವನ್ನು ದಿನಾಂಕ: 26.10.2016 ರಂದು ನಿರ್ದೇಶನವನ್ನು ಕೊಟ್ಟಿರುತ್ತಾರೆ. ಆ ಒಂದು ನಿರ್ದೇಶನದ ಪ್ರಕಾರ ನ್ಯಾಯಾಲಯದ ಮುಂದೆ ಇರುವ ಆರೋಪಿಗಳ ವಿರುದ್ದ ಪಿರ್ಯಾದಿಯನ್ನು ಕೊಡಲು ಆಹಾರ ನಿರೀಕ್ಷಕರು ಆದಂತಹ ಮಲ್ಲಪ್ಪ ಬಿದರಿ ಇವರಿಗೆ ನಾನು ದಿನಾಂಕ: 02.11.2016 ರಂದು ಲಿಖಿತವಾಗಿ ಮನವಿ ಕೊಟ್ಟಿದ್ದೇನೆ. ಆ ರೀತಿ ಆರೋಪಿಗಳು ಈ ಪ್ರಕರಣದಲ್ಲಿ ಹೇಳಿದಂತಹ ಘಟನೆಯಲ್ಲಿ ಒಟ್ಟು 8 ನ್ಯಾಯ ಬೆಲೆ ಅಂಗಡಿಗಳ ಒಟ್ಟು 26 ಕೂಪನಗಳನ್ನು ಬಳಸಿಕೊಂಡು ಸರ್ಕಾರಕ್ಕೆ ರೂ.51,738/- ಗಳಷ್ಟು ನಷ್ಟವನ್ನುಂಟು ಮಾಡಿರುತ್ತಾರೆ. ಆ ಕುರಿತಾಗಿ ಈ ಪ್ರಕರಣದಲ್ಲಿನ ಚಾ.ಸಾ-1 ಆಹಾರ ನಿರೀಕ್ಷಕರು ಈ ಪ್ರಕರಣದಲ್ಲಿನ ಆರೋಪಿಗಳ ವಿರುದ್ದ ಲಿಖಿತ ಪಿರ್ಯಾದಿಯನ್ನು ಕೊಟ್ಟಿರುತ್ತಾರೆ.

<u>ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೇಳಲಾಗಿ, ಅವಕಾಶ ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.